ಊರಿನ ದೇವಸ್ಥಾನವೇ ನೆನಪಾಗುತ್ತದೆ. ನೆಮ್ಮದಿಯಿಂದ ಮಲಗಿದ್ದ ದೇವರನ್ನು ಎಬ್ಬಿಸಲೆಂದು ಪೂಜಾರಿ ನಸುಕಿನಲ್ಲೇ ಗುಡಿಗೆ ಬಂದು ಗಂಟೆ ಬಾರಿಸಿದಾಗ ಆ ಸದ್ದು ನನ್ನ ಕಿವಿಗೇ ಮೊದಲು ಬೀಳುತ್ತಿತ್ತು. ಬಿದ್ದು, ನಾನೇನೂ ಏಳುತ್ತಿದ್ದೆ ಅಂತಲ್ಲ, ಎಚ್ಚರವಂತೂ ಆಗುತ್ತಿತ್ತು. ಮನೆಯ ಪಕ್ಕದ ಅಶ್ವತ್ಥ ಮರದಲ್ಲಿನ ನೂರಾರು ಪಕ್ಷಿಗಳು ಕಲರವ ಎಬ್ಬಿಸುತ್ತಿರುವುದೂ ನನ್ನ ಕಿವಿಗೆ ಬೀಳುತ್ತಿತ್ತು. ಕೊಟ್ಟಿಗೆಯಲ್ಲಿದ್ದ ಆಕಳು–ಎಮ್ಮೆಗಳು ಕೂಡ ಎದ್ದು ಅಂಬಾ ಎನ್ನುತ್ತ ದನಿಗೂಡಿಸುತ್ತಿದ್ದವು. ಅಂತೂ ಇಡೀ ಜಗತ್ತೇ ಒಕ್ಕೊರಲಿನಲ್ಲಿ ನನ್ನನ್ನು ಹಾಸಿಗೆಯಿಂದ ಎಬ್ಬಿಸುವ ಮಸಲತ್ತು ಮಾಡುತ್ತಿದೆ ಎಂದು ನಾನು ಮಲಗಿದ್ದಲ್ಲೇ ಮುಲುಗುತ್ತಿದ್ದೆ. ಹತ್ತು ವರುಷದ ಮಾಣಿಯ ಸುಖನಿದ್ದೆಗೆ ಹತ್ತೊಂದು ಕಂಟಕಗಳು.

ಏಳಲೋ ಬೇಡವೋ ಅಂತ ಯೋಚಿಸುತ್ತ, ಎದ್ದಿದ್ದೇ ಆದರೆ ಆದಿನದ ಕೆಲಸಗಳಲ್ಲಿ ಯಾವು ಯಾವುದನ್ನು ಕೈಬಿಡಬಹುದು, ಯಾವುಯಾವುದನ್ನು ಮುಂದೂಡಬಹುದು, ಯಾವುಯಾವುದನ್ನು ಮುನ್ನೆಲೆಗೆ ತರಬಹುದು ಎಂದೆಲ್ಲ ಪ್ಲಾನ್ ಹಾಕುತ್ತ ಮಗ್ಗುಲು ಬದಲಿಸುತ್ತಿದ್ದೆ. ಆ ಹೊತ್ತಿಗೆ ಸರಿಯಾಗಿ ಅಮ್ಮ ಹೊಸ್ತಿಲ ಪಟ್ಟಿಯನ್ನು ಒರೆಸುತ್ತಲೋ, ನೆಲಸಾರಿಸಿ ರಂಗೋಲಿ ಹಾಕುತ್ತಲೋ ಹಾಡು ಗುನುಗುನಿಸುವುದು ಕಿವಿಗೆ ಬೀಳುತ್ತಿತ್ತು. ಅದು ಸಾಮಾನ್ಯವಾಗಿ ಶ್ರೀಮನ್ನಾರಾಯಣನನ್ನು ಎಬ್ಬಿಸುವ ಹಾಡೇ ಆಗಿರುತ್ತಿತ್ತು.

ರಂಗನಾಯಕ ರಾಜೀವ ಲೋಚನ ರಮಣನೆ ಬೆಳಗಾಯಿತು ಏಳೆನ್ನುತ<br>
ಅಂಗನೆ ಲಕುಮಿ ತಾ ಪತಿಯನೆಬ್ಬಿಸಿದಳು ಶೃಂಗಾರದ ನಿದ್ದೆ ಸಾಕೆನ್ನುತ...<br>
ಪಕ್ಷಿರಾಜನು ಬಂದು ಬಾಗಿಲಲ್ಲಿ ನಿಂದು...

ಮುಂದಿನದು ನೆನಪಿಗೆ ಬರುತ್ತಿಲ್ಲ. ಏಕೆಂದರೆ ದೇವರನ್ನು ಎಬ್ಬಿಸುವ ಹಾಡಿನ ಪಲ್ಲವಿಯಿಂದಲೇ ನನಗೆ ಮತ್ತೆ ನಿದ್ದೆ ಬಂದಿರುತ್ತಿತ್ತು. ಮುಂಜಾನೆಯ ಆ ಮೆಲುದನಿಯ ಸುಶ್ರಾವ್ಯ ಹಾಡನ್ನು ಕೇಳುತ್ತ ಸಲೀಸಾಗಿ ಸ್ವಪ್ನಲೋಕಕ್ಕೆ ಜಾರುತ್ತಿದ್ದೆ. ಕನಸಿನಲ್ಲಿ ನಾನು ಹಾಸಿಗೆಯಿಂದ ಎದ್ದು ಅಂಗಳಕ್ಕಿಳಿದು, ಅಲ್ಲಿ ನನಗಾಗಿ ಕಾದಿದ್ದ ಪಕ್ಷಿರಾಜ ಗರುಡನ ಮೇಲೆ ಕೂತಂತೆ. ಅವನು ನನ್ನನ್ನು ಹೊತ್ತು ಆಕಾಶಕ್ಕೆ ಏರಿದಂತೆ. ಇತ್ತ ಶ್ರೀಮನ್ನಾರಾಯಣ ಕಣ್ಣುಜ್ಜುತ್ತ ಎದ್ದು ಬಂದು ತನ್ನ ವಾಹನ ಎಲ್ಲಿ ಹೋಯಿತೆಂದು ಕಣ್ಣು ಕಣ್ಣು ಬಿಟ್ಟಂತೆ.

ಇದೇ ಕನಸು ಈಚೆಗೆ ಮತ್ತೆ ರಿಪೀಟ್ ಆಗಿದ್ದುಂಟು. ಸಿಡ್ನಿಯಲ್ಲಿರುವ ನನ್ನ ಮಗ ತಾನು ಖರೀದಿಸಿದ ಹೊಸ ಕಾರು ಸೆಲ್ಫ್ ಪಾರ್ಕಿಂಗ್ ಮಾಡಿಕೊಳ್ಳುತ್ತದೆ ಎಂದು ಹೇಳಿದ ಮರುದಿನ ಮುಂಜಾನೆಯೂ ಅದೇ ಕನಸು ಬಿದ್ದಿತ್ತು.

ತನಗೆ ತಾನೇ ಸ್ವಸ್ಥಾನಕ್ಕೆ ಹೋಗಿ ನಿಲ್ಲುವ ಎಲ್ಲ ವ್ಯವಸ್ಥೆಗಳೂ ನನಗೆ ಅಚ್ಚುಮೆಚ್ಚು. ಚಿಕ್ಕವನಿದ್ದಾಗ ಹಳ್ಳಿಯಲ್ಲಿ ಸಂಜೆ ಗೋಧೂಳಿ ಸಮಯಕ್ಕೆ ಸರಿಯಾಗಿ ದನಗಳೆಲ್ಲ ಕೊಟ್ಟಿಗೆಗೆ ಬಂದರೂ ಕೆಲವು ಮಾತ್ರ ತಂತಮ್ಮ ಜಾಗಕ್ಕೆ ಹೋಗಿ ನಿಲ್ಲುತ್ತಿದ್ದವು. ಇನ್ನು ಕೆಲವು ಅಲ್ಲೇ ಅಕ್ಕಪಕ್ಕ ಸುಳಿದಾಡುತ್ತ ತೊಂಡೆಚಪ್ಪರಕ್ಕೊ, ಸೌತೆಬಳ್ಳಿಗೊ, ಹುಲ್ಲಿನ ಬಣವೆಗೊ ಬಾಯಿ ಹಾಕುತ್ತ ರಗಳೆ ಎಬ್ಬಿಸುತ್ತಿದ್ದವು. ಅವನ್ನೆಲ್ಲ ಕೊಟ್ಟಿಗೆಗೆ ಸಾಗಿಸಿ ಗೂಟಕ್ಕೆ ಕಟ್ಟಬೇಕಿದ್ದ ಡ್ಯೂಟಿಯಿದ್ದ ನನಗೆ ಆಗೆಲ್ಲ ಸಿಟ್ಟುಬಂದು, ಬಣವೆಗೆ ಬೆಂಕಿ ಬಿದ್ದಂತೆ ಗಾಬರಿಯಿಂದ ಕೋಲು, ಬರಲು, ಹುಡುಕುತ್ತ ಏನೊ ಅಂತೂ ಕೈಗೆ ಸಿಕ್ಕ ಬಡಿಗೆ ಎತ್ತಿ ದನಕ್ಕೆ ಬಡಿದಂತೆ ಅವಕ್ಕೆ ಬಡಿಯಲು ಹೋಗಿದ್ದೂ ಉಂಟು. ಹಾಗೆ ಒಮ್ಮೆ ಬೇರೇನೂ ಸಿಗದೆ ಬೇಲಿಗೂಟವನ್ನೇ ಕಿತ್ತು ಎತ್ತಿದ್ದಕ್ಕೆ ದೂರದಲ್ಲಿದ್ದ ಅಮ್ಮ ಅದನ್ನೇ ಕಸಿದು ನನಗೆ ಬಾರಿಸಲು ಬಂದಿದ್ದೂ ಉಂಟು.

ಅವಳಿಗೆ ಆಸೆಬುರುಕ ದನದ ಮೇಲೆ ಕರುಣೆ ಉಕ್ಕಿತ್ತೊ ಅಥವಾ ಬೇಲಿಯೊಳಗೆ ಸುರಕ್ಷಿತ ಬೆಳೆದಿದ್ದ